**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1735/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರಮೋದ್ | ಫ್ರಾಸಾ-3 |
| ತಂದೆಯ ಹೆಸರು | : ನಾರಾಯಣಗೌಡ | ಚಾಸಾ-5 |
| ವಯಸ್ಸು | : 23 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಮೈಕ್ರೋ ಫೆನಾನ್ಸ್‌ನಲ್ಲಿ ಕೆಲಸ | ದಿನಾಂಕಃ 12.08.2025 |
| ವಾಸಸ್ಥಳ | : ಕೂವೆ | |

**<u>:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ಈ ಹಿಂದೆ ಅವರು ದನ ಕಳ್ಳತನ ಮಾಡುವಾಗ ನೋಡಿದ್ದೇನೆ. ಚಾಸಾ-2 ರಿಂದ 4 ಮತ್ತು 6 ರವರ ಪರಿಚಯ ನನಗಿದೆ.

ದಿ.10.07.2023 ರಂದು ಮಧ್ಯ ರಾತ್ರಿ 1 ಗಂಟೆ ಸಮಯಕ್ಕೆ ಚಾಸಾ-4 ರವರು ನನಗೆ ಕರೆ ಮಾಡಿ ಜಾವಳಿಯ ಕೆನರಾ ಬ್ಯಾಂಕ್ ಮುಂದೆ ದನ ಕಳ್ಳತನ ಆಗುತ್ತಿದೆ ಎಂದು ನನ್ನನ್ನು ಬರುವಂತೆ ಕರೆದರು. ಸದರಿ ಸ್ಥಳಕ್ಕೆ ನಾನು ರಾ.1.15 ರ ಸಮಯಕ್ಕೆ ಹೋಗಿ ನೋಡಿದಾಗ ಅಲ್ಲಿ ಆರೋಪಿತರು, ಪೋಲಿಸರು ಮತ್ತು ಅಶೋಕ ಲೇಲ್ಯಾಂಡ್ ವಾಹನ ಇತ್ತು. ಸದರಿ ವಾಹನದಲ್ಲಿ 3-4 ದನಗಳು ಇದ್ದವು. ನಂತರ ಪೋಲಿಸರು ಮಹಜರ್ ಮಾಡಿ ಹಗ್ಗ, ವಾಹನ, ಗೋಣೀಚೀಲಗಳು, ದನಗಳು ಮತ್ತು ಆರೋಪಿತರನ್ನು ವಶಕ್ಕೆ ಪಡೆದರು. ಮಹಜರ್ ಗೆ ನನ್ನ ಸಹಿಯನ್ನು ಸಹಾ ಪಡೆದಿದ್ದಾರೆ.

ಸಾಕ್ಷಿಯು ನಿಪಿ-4 ರಿಂದ 9 ರ ಪೋಟೋಗಳನ್ನು ನೋಡಿ ತಾವು ನೋಡಿದ ವಾಹನ ಮತ್ತು ದನಗಳು ಅವೇ ಎಂದು ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎಂ.ಒ.1 ರಿಂದ 3 ರ ವಸ್ತುಗಳನ್ನು ತನ್ನ ಸಮಕ್ಷಮ ಪೋಲಿಸರು ವಶಕ್ಕೆ ಪಡೆದಿದ್ದು ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ.ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:</u>**

ನಾನು ಹೇಳಿದ ದಿನಾಂಕದಂದು ಸ್ಥಳದಲ್ಲಿ ಇದ್ದ ಅಶೋಕ ಲೇಲ್ಯಾಂಡ್ ನೋಂದಣಿ ಸಂ.KA-13-C-9634 ಎಂದರೆ ಸರಿ. ಸದರಿ ವಾಹನದಲ್ಲಿ ಒಂದು ಕಪ್ಪು ಬಣ್ಣದ ಹೋರಿ ಮತ್ತು ಕಂದು ಬಣ್ಣದ ಹಸು ಇತ್ತು ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಹೆಚ್.ಕೆ.ಡಿ. ವಕೀಲರಿಂದಃ</u>**

ನಾನು ಹೇಳಿದ ದಿನಾಂಕದಂದು ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದು, ಆ ದಿನ ನಾನು ರಜೆಯಲ್ಲಿ ಇದ್ದೆ. ನಾನು ನನ್ನ ಕಾರಿನಲ್ಲಿ ಸ್ಥಳಕ್ಕೆ ಹೋಗಿದ್ದೆ. ಸ್ಥಳದಲ್ಲಿ 4-5 ಜನರು ಮಾತ್ರ ಇದ್ದರು. ಸ್ಥಳದಲ್ಲಿ ಇದ್ದ ಗ್ರಾಮಸ್ಥರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ನೋಡಿದಾಗ ಸ್ಥಳದಲ್ಲಿ ಎಷ್ಟು ಜನ

ಪೋಲಿಸರು ಇದ್ದರು ಎಂದು ನನಗೆ ಗೊತ್ತಿಲ್ಲ. ಬೆ.1.15 ರಿಂದ ಎಷ್ಟು ಗಂಟೆಗಳ ಕಾಲ ನಾನು ಸ್ಥಳದಲ್ಲಿ ಇದ್ದೆ ಎಂದು ನನಗೆ ನೆನಪಿಲ್ಲ. ಆ ದಿನ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ. ಅಲ್ಲಿ ಪೋಲಿಸರು ನನ್ನ ಸಹಿಯನ್ನು ಪಡೆದಿಲ್ಲ. ನಾನು ಪೋಲಿಸ್ ಠಾಣೆಗೆ ಹೋಗಿದ್ದಾಗ ನನ್ನೊಂದಿಗೆ ಗ್ರಾಮಸ್ಥರು ಬಂದಿದ್ದರು. ಆನಂತರ ಮರುದಿನ ಪೋಲಿಸ್ ಠಾಣೆಗೆ ಹೋಗಿದ್ದು ಆಗ ನಾನು ಎರಡು ಸಹಿಗಳನ್ನು ಮಾಡಿರಬಹುದು. ಆ ರೀತಿ ಸಹಿ ಮಾಡಿದ ದಾಖಲೆ ಮಹಜರ್ ಆಗಿದೆ. ಈಗ ನೋಡುತ್ತಿರುವ ನಿಪಿ-3 ರ ಮಹಜರ್ ನಲ್ಲಿ ನನ್ನ ಸಹಿ ಇಲ್ಲ. ನಾನು ಹೇಳಿದ ಸ್ಥಳದಲ್ಲಿ ದನಗಳೊಂದಿಗೆ ನನ್ನನ್ನು ನಿಲ್ಲಿಸಿ ಪೋಟೋ ತೆಗೆದಿಲ್ಲ.

ಸ್ಥಳದಲ್ಲಿ ಇತ್ತು ಎಂದು ಹೇಳಲಾದ ವಾಹನದಲ್ಲಿ ಒಟ್ಟು ಎಷ್ಟು ದನಗಳು ಇತ್ತು ಎಂದರೆ ಸಾಕ್ಷಿಯು 2-3 ಇದ್ದಿರಬಹುದು ಎಂದು ನುಡಿಯುತ್ತಾರೆ. ಸದರಿ ದನಗಳ ವಯಸ್ಸು ಮತ್ತು ಬಣ್ಣಗಳನ್ನು ನಾನು ಹೇಳಲು ಆಗುವುದಿಲ್ಲ. ನಾನು ಹೇಳಿದ ಸ್ಥಳದ ಅಕ್ಕಪಕ್ಕ ಪೋಸ್ಟ್ ಆಫೀಸ್, ಆಟೋ ಸ್ಟ್ಯಾಂಡ್ ಮತ್ತು ಹಾಸ್ಟೆಲ್ ಇದೆ ಎಂದರೆ ಸರಿ. ಸ್ಥಳದಲ್ಲಿ ಇದ್ದ ಬ್ಯಾಂಕ್ ಗೆ ಸಿಸಿ ಟಿವಿ ಅಳವಡಿಸಲಾಗಿತ್ತು ಎಂದರೆ ಸರಿ. ಜಾವಳಿ ಬ್ಯಾಂಕ್ ನಿಂದ ನನ್ನ ಮನಗೆ 5-6 ಕಿ.ಮೀ ಅಂತರ ಇದೆ. ವಾಹನ ಮತ್ತು ಆರೋಪಿತರೊಂದಿಗೆ ನಿಲ್ಲಿಸಿ ನನ್ನ ಪೋಟೋ ತೆಗೆದಿಲ್ಲ. ದಿ.10.07.2023 ರಂದು ನಾನು ಯಾವುದೇ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಎಂ.ಒ.1 ರಿಂದ 3 ರ ವಸ್ತುಗಳು, ಆರೊಪಿತರು ಹಾಗೂ ಯಾವುದೇ ದನಗಳು ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.